# RIMS Hospital (Old) Minor Civil Works Meeting

ಕಟ್ಟಡ ಕಾಮಗಾರಿ ಸಮಿತಿ ಸಭೆಯು ದಿನಾಂಕ 28.04.2012 ರಂದು 11.00 ಗಂಟೆಗೆ ನಿರ್ದೇಶಕರ ಕೊಠಡಿಯಲ್ಲಿ ಸಭೆ ಕರೆಯಲಾಗಿತ್ತು.

**ಸಭೆಯಲ್ಲಿ ಹಾಜರಿದ್ದ ಸದಸ್ಯರು :**

| | | | | |
|---|---|---|---|---|
| 1) ಡಾ. ರಾಮಯ್ಯ | – | ನಿರ್ದೇಶಕರು | – |
| 2) ಡಾ. ಜಗಜೀವನ್ ರಾಂ | – | ಸ್ಥಾನಿಕ ವೈದ್ಯಾಧಿಕಾರಿಗಳು | – |
| 3) ಶ್ರೀ ನಾಗೇಶ | – | ಪ್ರಭಾರಿ ಮುಖ್ಯ ಆಡಳಿತಾಧಿಕಾರಿಗಳು | – |
| 4) ಶ್ರೀ ಮಲ್ಲಿಕಾರ್ಜುನ ಮೇಟಿ | – | ಸಹಾಯಕ ಕಾರ್ಯ ಪಾಲಕ ಅಭಿಯಂತರರು | – |
| 5) ಶ್ರೀ ಎಸ್.ವಿ.ರಮೇಶ | – | ಎ.ಇ. | – |
| 6) ಶ್ರೀ ವಿ.ಬಿ. ಶೆಟ್ಟಿ | – | ಎ.ಇ. | – |
| 7) ಶ್ರೀ ಲಕ್ಷ್ಮಿ ನರಸಿಂಹ | – | ಎ.ಇ–2 | – |
| 8) ಶ್ರೀ ಮುರಳಿ | – | ಹೆಚ್‌ಐಪಿಎಲ್ ಪ್ರತಿನಿಧಿ | – |
| 9) ಶ್ರೀ ಕೆ.ಹನುಮೇಶ | – | ಹೆಚ್‌ಐಪಿಎಲ್ ಪ್ರತಿನಿಧಿ | – |

**ಸಭೆಯಲ್ಲಿ ಚರ್ಚೆಗೊಂಡ ವಿಷಯಗಳು :**

ನಿರ್ದೇಶಕರು ಮೊದಲಿಗೆ ಎಲ್ಲರನ್ನು ಸ್ವಾಗತಿಸಿದರು. ವಸತಿ ಗೃಹಗಳಲ್ಲಿ ಈಗಾಗಲೇ ವೈದ್ಯರುಗಳು, ಶುಶ್ರೂಷಕರು ಮತ್ತು ಪ್ರಯೋಗಶಾಲಾ ತಂತ್ರಜ್ಞರು ವಾಸಿಸುತ್ತಿದ್ದು , ಮೀಟರ್ ಅಳವಡಿಕೆ ಇಲ್ಲದ ಕಾರಣ ವಿದ್ಯುಚ್ಛಕ್ತಿಯ ಹೊರೆ ಸಂಸ್ಥೆಯ ಮೇಲೆ ಬೀಳುತ್ತಿದೆ. ಕಾರಣ ಅತಿ ಜರೂರಾಗಿ ವಸತಿ ಗೃಹಗಳಲ್ಲಿ ಈಗಾಗಲೇ ಅಳವಡಿಸಿದ ಮೀಟರ್ ಕಾರ್ಯಾರಂಭ ಮಾಡಲು ಕ್ರಮಕೈಗೊಳ್ಳಲು ಸೂಚಿಸಿದರು.

ದಿನಾಂಕ 26.04.2012 ರಂದು ಗುಲ್ಬರ್ಗಾದಲ್ಲಿ ಜರುಗಿದ ಲೋಕ ಅದಾಲತ್‌ನಲ್ಲಿ ಹೊಸ ಆಸ್ಪತ್ರೆ ಕಟ್ಟಡ ವಿಳಂಬದ ಬಗ್ಗೆ ಚರ್ಚಿಸಿದ್ದು , ಜೂನ್ ತಿಂಗಳ ಅಂತ್ಯದೊಳಗೆ ಕಟ್ಟಡ ಕಾಮಗಾರಿ ಪೂರ್ಣಗೊಳಿಸುವಂತೆ ಆದೇಶಿಸಿರುತ್ತಾರೆ. ಆದ್ದರಿಂದ ಆದಷ್ಟು ಬೇಗನೆ ಜೂನ್ ಅಂತ್ಯದ ವೇಳೆಗೆ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಿ ಸಂಸ್ಥೆಗೆ ಹಸ್ತಾಂತರಿಸಲು ಬೇಕಾದ ಕ್ರಮ ಕೈಗೊಳ್ಳಲು ಸೂಚಿಸಿದರು. ಅದಕ್ಕೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಈಗಾಗಲೇ 5ನೇ ಮಹಡಿ ಒಳ ಪ್ಲಾಸ್ಟರಿಂಗ್ ಕಾರ್ಯ ಪೂರ್ಣಗೊಂಡಿರುತ್ತದೆ ಮತ್ತು 6ನೇ ಮಹಡಿಯಲ್ಲಿ ಕಾಮಗಾರಿ ಪ್ರಾರಂಭವಾಗಿರುತ್ತದೆ. ಆದರೆ ಜೂನ್ ಅಂತ್ಯದ ವೇಳೆಗೆ ಕಾಮಗಾರಿ ಪೂರ್ಣಗೊಳಿಸಲು ಕಷ್ಟಸಾಧ್ಯವಾದ್ದು , ಆದಷ್ಟು ಆಗಸ್ಟ್ ತಿಂಗಳಲ್ಲಿ ಎಲ್ಲಾ ಕಾಮಗಾರಿ ಪೂರ್ಣಗೊಳಿಸುವ ಭರವಸೆ ನೀಡಿದರು. ಅದಕ್ಕೆ ನಿರ್ದೇಶಕರು ಈಗಾಗಲೇ ಈ ವಿಷಯ ಲೋಕ ಅದಾಲತ್‌ನಲ್ಲಿ ಚರ್ಚೆಯಾಗಿದ್ದು , ಇದು ಅತ್ಯಂತ ಗಂಭೀರ ವಿಷಯವಾಗಿದ್ದರಿಂದ ಕಾಮಗಾರಿಯನ್ನು ಚುರುಕುಗೊಳಿಸುವಂತೆ ತಿಳಿಸಿದರು.

ಮಾಲ್‌ನ್ಯೂಟ್ರಿಷನ್ ಮಕ್ಕಳ ಪೋಷಣೆಗಾಗಿ ಒಂದು ವಾರ್ಡ್ ಸ್ಥಾಪಿಸಲು ಸ್ಥಳವಿರುವುದಿಲ್ಲ, ರಾಯಚೂರಿನ ಜನಸಂಖ್ಯೆ ಜಾಸ್ತಿಯಿರುವ ಕಾರಣ ಅವರಿಗೆ ಪ್ರತ್ಯೇಕ ವಾರ್ಡ ಅವಶ್ಯಕತೆಯಿರುತ್ತದೆ. ಈಗಿರುವ ಹಳೆಯ ಜಿಲ್ಲಾ ಆಸ್ಪತ್ರೆಯ ಕಟ್ಟಡ ಶಿಥಿಲಾವಸ್ಥೆಯಲ್ಲಿರುವುದರಿಂದ , ಮಳೆ ಬಂದಾಗ ಕೆಲವೆಡೆ ಸೋರುತ್ತಿರುವುದು ಮತ್ತು ಕೆಲ ಕಡೆ ಮಣ್ಣು ಉದುರುತ್ತಿರುವುದು. ಹಾಗಾಗಿ ರೋಗಿಗಳಿಗೆ ಹಾನಿಯಾದಲ್ಲಿ ಅಥವಾ ಅನಾಹುತ ಸಂಭವಿಸಿದಲ್ಲಿ ಅದಕ್ಕೆ ತಾವೇ ಜವಾಬ್ದಾರರಾಗಬೇಕಾಗುತ್ತದೆ. ಈ ಎಲ್ಲಾ ಕಾರಣಗಳಿಂದ ತ್ವರಿತಗತಿಯಲ್ಲಿ ಆಸ್ಪತ್ರೆಯ ಕಾಮಗಾರಿಯನ್ನು ಪೂರ್ಣಗೊಳಿಸಲು ತಿಳಿಸಲಾಯಿತು.

ವಿದ್ಯುತ್‌ಗೆ ಸಂಬಂಧಪಟ್ಟಂತೆ ವಿದ್ಯುತ್ ಕೇಬಲ್‌ಗಳು ಸರಿಯಾದ ರೀತಿಯಲ್ಲಿ ಜೋಡಣೆಯಾಗಿರುವುದಿಲ್ಲ , ಈಗಾಗಲೇ ವಸತಿ ಗೃಹಗಳಲ್ಲಿ ಸಿಬ್ಬಂದಿಗಳು ವಾಸಿಸುತ್ತಿದ್ದು ಏನೂ ಅನಾಹುತ ಆಗದಂತೆ ಎಚ್ಚರವಹಿಸಿ ಅವುಗಳನ್ನು ಸರಿಪಡಿಸಲು ಸೂಚಿಸಿದರು.

ಹೊಸ ಆಸ್ಪತ್ರೆಗೆ ಸಂಪರ್ಕ ಕಲ್ಪಿಸುವ ರಸ್ತೆ ಮತ್ತು ಕಂಪೌಂಡ ಕಾಮಗಾರಿಯು ಸಹ ಪೂರ್ಣಗೊಳಿಸುವಂತೆ ಸೂಚಿಸಿದರು ಮತ್ತು ಗುಣಮಟ್ಟ ಕಾಯ್ದುಕೊಳ್ಳುವಂತೆ ತಿಳಿಸಿದರು. ಆಪರೇಷನ್ ಕೊಠಡಿಗೆ ಸಂಬಂಧಿಸಿದಂತೆ ಅರವಳಿಕೆ ವಿಭಾಗದ ಪರಿಣಿತರೊಂದಿಗೆ ಚರ್ಚಿಸಿದಾಗ ಸಣ್ಣ ಪುಟ್ಟ ಬದಲಾವಣೆಗಳನ್ನು ಮಾಡಲು ಸಲಹೆ ನೀಡಿದರು. ಅದಕ್ಕೆ ಪಿಡಬ್ಲೂಡಿ ಅಧಿಕಾರಿಗಳು ನಿರ್ದೇಶಕರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಡಾ. ಎಸ್.ಡಿ.ಮಂಡೋಲ್ಕರ್, ಡಾ. ಜಗಜೀವನ್ ರಾಂ, ಡಾ. ನಂದನ್ ಪಡಶೆಟ್ಟಿ , ಡಾ. ಅರವಿಂದ ಸಂಗಾವಿ ಇವರುಗಳನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಿ ಆಪರೇಷನ್ ಕೊಠಡಿಯ ಮೇಲ್ವಿಚಾರಣೆಯನ್ನು ಈ ಸಮಿತಿಗೆ ವಹಿಸಲು ಸೂಚಿಸಿದರು.

ಲೋಕ ಅದಾಲತ್ ನಲ್ಲಿ ಚರ್ಚಿಸಿದಂತೆ , ಕಟ್ಟಡ ಕಾಮಗಾರಿ ಪೂರ್ಣಗೊಳಿಸುವಂತೆ ಮುಖ್ಯ ಅಭಿಯಂತರರಿಗೆ ಒಂದು ಪತ್ರ ಬರೆಯುವಂತೆ ನಿರ್ದೇಶಕರು ವಿಷಯ ನಿರ್ವಾಹಕರಿಗೆ ಸೂಚಿಸಿದರು.

ವಂದನೆಗಳೊಂದಿಗೆ ಸಭೆ ಮುಕ್ತಾಯವಾಯಿತು.

ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ರಾಯಚೂರ

# MEETING PROCEEDING BOOK

## ದಿನಾಂಕದಂದು ನಡೆದ ಕಾರ್ಯಕಾರಿ ಸಮಿತಿಯ ತೀರ್ಮಾನಗಳು



ಸಂಸ್ಥೆಯ ಹೆಸರು : ........................................

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ | ಷರಾ |
|---|---|---|---|
| | RIMS Hospital (old) Minor Civil works Meeting held on 28.04.2012 at 11.00 AM at Director's chamber, RIMS Raichur. | | |
| | Members were present: | | |
| 1) | Dr. Ramaiah | Dean cum Director | [signature] |
| 2) | Dr. Jayjeevan Ram | R.M.O. | [signature] |
| 3) | Sri Nagesh | I/c C.A.O. | [signature] |
| 4) | Sri Mallikarjun Meti | A.E.E | [signature] |
| 5) | Sri S.V. Ramesh | A.E. | [signature] |
| 6) | Sri V.B. Shetty | A.E. | [signature] |
| 7) | Sri Laxmi Narsimha | A.E-2. | [signature] |
| 8) | Sri Murali | HIPL- Contractor Representative | [signature] |
| 9) | Sri K. Hanumeth | HIPL- Contractor Representative | [signature] |